**ಸಾಕ್ಷಿಯನ್ನು ದಿನಾಂಕಃ 16.07.2026 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು : ಶ್ರೀ ಎಸ್ ಜಿ ಕೆ ವಕೀಲರಿಂದ :**

ನನ್ನ ಗಂಡನ ಹೆಸರು ಅರುಣ್ ಕುಮಾರ್. ನಾನು 9 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ದೇವನಹಳ್ಳಿಯಲ್ಲಿ ಜನಿಸಿರುತ್ತೇನೆ. ಈ ದಿನ ನನ್ನ ಗಂಡ ನನ್ನೊಂದಿಗೆ ಬಂದಿದ್ದಾರೆ ಎಂದರೆ ಹೌದು. ಪ್ರತಿಸಲ ನಾನು ಅವರೊಂದಿಗೆ ಬರುತ್ತೇನೆ ಎಂದರೆ ಹೌದು. ಈ ಪ್ರಕರಣದ ವಿಚಾರ ನನಗೆ ಹಾಗೂ ನನ್ನ ಗಂಡನಿಗೆ ಚೆನ್ನಾಗಿ ಗೊತ್ತಿದೆ ಎಂದರೆ ಹೌದು.

ನಾನು ಗೃಹಿಣಿ. ನನ್ನ ಗಂಡ ಮೋಟಾರ್ ಎತ್ತುವ ಇಳಿಸುವ ಕೆಲಸ ಮಾಡುತ್ತಾರೆ. ನನಗೆ ಇಬ್ಬರು ಮಕ್ಕಳು. ಮಗಳು 10 ನೇ ತರಗತಿ ಹಾಗೂ ಮಗ ಪಿ ಯು ಸಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನನಗೆ ಯಾವುದೇ ಸ್ವತಂತ್ರ್ಯವಾದ ಆದಾಯ ಇರುವುದಿಲ್ಲ. ನನ್ನ ಗಂಡನಿಗೆ ಎಷ್ಟು ಆದಾಯ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ, ಅದು ಕೆಲಸದ ಆಧಾರದ ಮೇರೆಗೆ ಅವಲಂಬಿತವಾಗುತ್ತದೆ.

ನನ್ನ ಗಂಡನಿಗೆ ಆದಾಯ ಇದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿ ಇಲ್ಲ. ನನ್ನ ಗಂಡ ಹಾಗೂ ಆರೋಪಿಯ ಮಧ್ಯೆ ನಡೆಯುತ್ತಿರುವ ಕೇಸ್ ಬಗ್ಗೆ ನಾನು ತಿಳಿದುಕೊಂಡಿದ್ದೇನೆ.

ನಾವು ಹಾಗೂ ಆರೋಪಿ ಒಂದೇ ಊರಿನಲ್ಲಿ ವಾಸಿಸುತ್ತೇವೆ ಎಂದರೆ ಹೌದು. ನನ್ನ ಗಂಡ ಹಾಗೂ ಆತನ ಒಡಹುಟ್ಟಿದವರು ಆರೋಪಿ ವಿರುದ್ಧ ಅಸಲು ದಾವೆ ಸಂಖ್ಯೆ 696/2024 ರಂತೆ ಭೂಮಿಗಳಿಗೆ ಸಂಬಂಧಿಸಿದಂತೆ ಘೋಷಣಾತ್ಮಕ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಹೌದು. ದಿಃ

11.11.2024 ರಲ್ಲಿ ಅವರು ನಮ್ಮ ವಿರುದ್ಧ ಗಲಾಟೆ ಮಾಡಿರುತ್ತಾರೆ ಎಂದು ಆ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಆ ರೀತಿ ಗಲಾಟೆ ಆಗಿರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಜಮೀನನ್ನು ಅವರ ಹೆಸರಿಗೆ ಮಾಡಿಸಿಕೊಳ್ಳಲು ಹೋದಾಗ ಆ ದಾವೆಯಲ್ಲಿ ಸಲ್ಲಿಸಿರುತ್ತೇವೆ.

ಎ ಸಿ ನ್ಯಾಯಾಲಯದಲ್ಲಿ ಆದೇಶ ಆದ ಬಗ್ಗೆ ನಮಗೆ 2024 ರ ಮುಂಚೆಯೇ ತಿಳಿದು ಬಂದಿರುತ್ತದೆ. ಆದಾದ ತಕ್ಷಣ ನಾವು ಸಿವಿಲ್ ಪ್ರಕರಣವನ್ನು ದಾಖಲು ಮಾಡಿರುತ್ತೇವೆ. ಆ ಪ್ರಕರಣವನ್ನು ದಾಖಲು ಮಾಡಿದ ನಂತರ ನಾವು ಅವರು ಭೇಟಿ ಆಗಿರಲಿಲ್ಲ, ಆದರೆ ನಮಗೂ ಅವರಿಗೂ ಜಗಳ ಆಗಿರುವುದಿಲ್ಲ ನಾವು ಚೆನ್ನಾಗಿ ಇದ್ದೇವು.

ನಾನು ಸಿವಿಲ್ ಕೇಸ್ ಗೆ ನನ್ನ ಗಂಡನೊಂದಿಗೆ ಬಂದಿದ್ದಾಗ ಆರೋಪಿಯ ಅಣ್ಣ ತಮ್ಮಂದಿರು ಆ ನ್ಯಾಯಾಲಯದಲ್ಲಿ ಹಾಜರಿದ್ದರು. ಈ ದೂರನ್ನು ಸಲ್ಲಿಸುವ ಮೊದಲು ಒಂದು ಬಾರಿ ಹಾಜರಿದ್ದೇನು.

ಆರೋಪಿ ಸರ್ಕಾರಿ ನೌಕರ ಎಂದರೆ ಹೌದು. ಆರೋಪಿ ಗ್ರಾಮ ಪಂಚಾಯಿತಿ ಸೆಕ್ರೆಟರಿ ಎಂದರೆ ಹೌದು. ಅವರಿಗೆ ಒಳ್ಳೆ ಆದಾಯ ಇದೆ ಎಂದರೆ ಹೌದು. ಆರೋಪಿಯೇ ನಿಪಿ 1 ನ್ನು ಸಹಿ ಮಾಡಿ ನೀಡಿರುತ್ತಾರೆ, ಅದನ್ನು ನಾವು ನಮ್ಮ ಮನೆಯಲ್ಲಿ ಅದನ್ನು ನನ್ನ ಗಂಡನೇ ಭರ್ತಿ ಮಾಡಿಕೊಂಡಿರುತ್ತಾನೆ. ಅದನ್ನು ಬರೆದಾಗ ನಾನು ನನ್ನ ಗಂಡ ಇಬ್ಬರೇ ಇದ್ದೇವು. ಅದನ್ನು ಭರ್ತಿ ಮಾಡುವಾಗ ಆರೋಪಿ ನಮಗೆ ಮಾಹಿತಿ ನೀಡಿರಲಿಲ್ಲ ಎಂದರೆ ನೀಡಿದ್ದರು. ಅಸಲು ದಾವೆ ಹಾಕಿದ ನಂತರ ನಮಗೂ ಅವರಿಗೂ ಒಳ್ಳೇ ಭಾಂದವ್ಯ ಇರಲಿಲ್ಲ ಎಂದರೆ ಇತ್ತು.

ನಾನು ನನ್ನ ಬಳಿ ದೂರಿನಲ್ಲಿ ಹೇಳಿದ ಮೊತ್ತ ಆ ದಿನದಂದು ಇತ್ತು ಎಂದು ತೋರಿಸಲು ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ. ನನ್ನ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ನನಗೆ ನೆನಪಿಲ್ಲ. ಆ ದಿನ ನನ್ನ ಖಾತೆಯಲ್ಲಿ

ಯಾವುದೇ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ಹಣ ಇತ್ತು ಎಂದು ತೋರಿಸಲು ನಾನು ದಾಖಲಾತಿಗಳನ್ನು ಬೇಕಾದರೆ ಹಾಜರು ಪಡಿಸಬಲ್ಲೇ.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ ಹೇ ಕೇ ಸ ಇ ಎಂದರು**

Sd/-

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ, ಚಿಕ್ಕಬಳ್ಳಾಪುರ.**